# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 79/2021

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ಕಮಲಾ ಪ್ರಸಾದ್ | ಪ್ರಮಾಣ ಮಾಡಿಸಿದ ದಿನಾಂಕಃ | | |
| ತಂದೆ/ಗಂಡನ ಹೆಸರು | ಃ | ಶ್ರೀ ಲೇ.ರಾಮ್‌ಲಾಲ್ ಗುಪ್ತ | 09.12.2024 | | |
| ವಯಸ್ಸು | ಃ | 63 ವರ್ಷ | | | |
| ವೃತ್ತಿ | ಃ | ನಿವೃತ್ತ ಡೆಪ್ಯೂಟಿ ಮ್ಯಾನೇಜರ್ (ಸೆಕ್ಯೂರಿಟಿ) | ಪ್ರಾ.ಸಾ. | ಃ | 03 |
| ವಾಸಸ್ಥಳ | ಃ | ಬೆಂಗಳೂರು | ಚಾ.ಸಾ. | ಃ | 03 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಜೂನ್ *2019* ರಿಂದ ದಿಃ*30.11.2021* ರವರೆಗೆ ಮೈಸೂರಿನ ಆರ್.ಬಿ.ಐ ನೋಟು ಮುದ್ರಣ ಘಟಕದಲ್ಲಿ ಡೆಪ್ಯೂಟಿ ಮ್ಯಾನೇಜರ್ ಸೆಕ್ಯೂರಿಟಿ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ದಿಃ*13.01.2021* ರಂದು ರಾತ್ರಿ *11* ಗಂಟೆಗೆ ನಮ್ಮ ಸೆಕ್ಯೂರಿಟಿ ಸಿಬ್ಬಂದಿಗಳಾದ ಸಿದ್ದಪ್ಪ ಮತ್ತು ನಾಗೇಶ್ ಇವರು ಆರ್.ಬಿ.ಐ ಕ್ಯಾಂಪಸ್ ಒಳಗೆ ಸಂಶಯಾಸ್ಪದ ವ್ಯಕ್ತಿಗಳು ಬಂದಿದ್ದಾರೆ ಎಂದು ಮೊಬೈಲ್ ಮೂಲಕ ಮಾಹಿತಿ ನೀಡಿದ್ದರು. ಆಗ ನಾನು, ಚಾ.ಸಾ–*2* ರಘುವರನ್ ಮತ್ತು ಚಾಸಾ–*1* ಅಜಿತ್ ಕುಮಾರ್ ಕರ್ಣ್ ಸೇರಿ ಆ ಸ್ಥಳಕ್ಕೆ ಹೋಗಿದ್ದೆವು. ಆಗ ಸಿಸಿ ಟಿವಿ ಸಿಬ್ಬಂದಿಗಳಿಗೆ ಮತ್ತು ಸೆಕ್ಯೂರಿಟಿ ಸಿಬ್ಬಂದಿಗಳಿಗೆ ಅಲರ್ಟ್ ಆಗಿ ಇರುವಂತೆ ಸೂಚಿಸಿದ್ದೆವು ಮತ್ತು ಆ ಸಂಶಯಾಸ್ಪದ ವ್ಯಕ್ತಿಗಳು ತಿರುಗಾಡುತ್ತಿದ್ದ ಸ್ಥಳದಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿದ್ದೆವು. ಆ ಕಾಲಕ್ಕೆ ***CISF*** ಸಿಬ್ಬಂದಿಗಳಿಗೂ ಸಹ ಮಾಹಿತಿ ನೀಡಿದ್ದೆವು. ಆಗ ಸೆಕ್ಯೂರಿಟಿ ಸಿಬ್ಬಂದಿಗಳು ಮತ್ತು

***CISF*** ಸಿಬ್ಬಂದಿಗಳು ಸೇರಿ ಆ ವ್ಯಕ್ತಿಗಳಿಗಾಗಿ ಹುಡುಕಾಡಿದ್ದರು. ಆ ಕಾಲಕ್ಕೆ ಬಹಳಷ್ಟು ಹೊತ್ತು ಹುಡುಕಾಡಿದ ಬಳಿಕ ಅಲ್ಲಿ ಇಬ್ಬರು ವ್ಯಕ್ತಿಗಳು ದೊರೆತಿದ್ದರು ಮತ್ತು ಅವರ ಹೆಸರು ರಘು ಮತ್ತು ಮಂಜುನಾಥ ಎಂದು ಗೊತ್ತಾಗಿತ್ತು. ದಿಃ*14.01.2021* ರ ಬೆಳಗಿನ ಜಾವ ***5.30-6*** ಗಂಟೆಗೆ ಆ ವ್ಯಕ್ತಿಗಳು ಅರಣ್ಯದಿಂದ ಹೊರಗಡೆ ಬಂದಿದ್ದರು. ಕೋರ್ಟ್ ಮುಂದೆ ಇರುವ *2* ನೇ ಆರೋಪಿತ ಮಂಜುನಾಥ ಮತ್ತು ಇನ್ನೊಬ್ಬ ವ್ಯಕ್ತಿ ಆ ದಿನ ನಮ್ಮ ಕ್ಯಾಂಪಸ್ ನಲ್ಲಿದ್ದ ವ್ಯಕ್ತಿಗಳು ಇರುತ್ತಾರೆ. ಈಗ ನಾನು ನೋಡುತ್ತಿರುವ ನಿ.ಪಿ-3 ರಿಂದ 16 ಪೊಟೋಗಳಲ್ಲಿ ಕಾಣುವ ಇನ್ನೊಬ್ಬ ವ್ಯಕ್ತಿ ಆ ದಿನ ನಮ್ಮ ಕ್ಯಾಂಪಸ್ ನಲ್ಲಿದ್ದ ಒಂದನೇ ಆರೋಪಿ ರಘು ಇರುತ್ತಾನೆ.

**ಈ ವೇಳೆಗೆ ಶ್ರೀಗಂಧದ ಕಟ್ಟಿಗೆಗಳನ್ನು ಈ ದಿನ ಕೋರ್ಟ್ ಮುಂದೆ ಹಾಜರುಪಡಿಸದೇ ಇರುವ ಕಾರಣ ಸಾಕ್ಷಿದಾರರ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*